ಇ) ಕಳುಹಿಸಿದ್ದಲ್ಲಿ, ಮೇಲ್ಕಂಡ ವೈದ್ಯಕೀಯ ಕಾಲೇಜಿಗೆ ಈ ಸ್ಥಾನಮಾನ ದೊರಕಿಸಿ ಕೊಡಲು ಸರಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ ಎಸ್ ಆಚಾರ್ಯ

ಅ) 1 ಕಸ್ತೂರ ಬಾ ವೈದ್ಯಕೀಯ ಕಾಲೇಜು, ಮಂಗಳೂರು

2 ಕಸ್ತೂರ ಬಾ ವೈದ್ಯಕೀಯ ಕಾಲೇಜು, ಮಣಿಪಾಲ್

3 ಜೆ ಎನ್ ವೈದ್ಯಕೀಯ ಕಾಲೇಜು, ಬೆಳಗಾಂ

4 ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕ್ಕಾಲೇಜು, ಕೋಲಾರ

ಆ)ಇಲ್ಲ

ಇ) ಉದ್ಭವಿಸುವುದಿಲ್ಲ

189(363) ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ)

ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ)ಬೆಂಗಳೂರು ನಗರವು ಸೇರಿದಂತೆ ನಾಯಿಗಳ ಕಡಿತದಿಂದ ಇಲ್ಲಿಯವರೆಗೆ ಸತ್ತವರ ಸಂಖ್ಯೆ ಎಷ್ಟು?

ಆ)ನಾಯಿಗಳ ಕಡಿತವನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ)ನಾಯಿ,ವಿಷಪೂರಿತ ಹಾವು ಮತ್ತು ಕುದುರೆ ಇವುಗಳ ಕಡಿತಕ್ಕೆ ಒಳಗಾದರೆ ತಕ್ಷಣ ಔಷಧಿಯನ್ನು ಒದಗಿಸಲು ಕೈಗೊಂಡ ಕ್ರಮವೇನು?

ಈ)ರಾಜ್ಯದಲ್ಲಿ ಇರುವ ಸರ್ಕಾರಿ ಆಸ್ಪತ್ರೆಗಳು ಎಷ್ಟು? ಎಷ್ಟು ವೈದ್ಯರ ಕೊರತೆ ಇದೆ?

ಉ)ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಉನ್ನತ ಆರೋಗ್ಯ ದವರೆಗೂ ಜಿಲ್ಲಾವಾರು ವಿವರಗಳನ್ನು ಒದಗಿಸುವುದು?

ಅ)ಬೆಂಗಳೂರು ನಗರವೂ ಸೇರಿದಂತೆ ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಮೇ ಅಂತ್ಯದವರೆಗೆ ನಾಯಿ ಕಡಿತದಿಂದ ಸತ್ತವರ ಸಂಖ್ಯೆ –37

ಆ)ಈ ಬಗ್ಗೆ ಸ್ಥಳೀಯ ಸಂಸ್ಥೆಗಳು, ಪಟ್ಟಣ ಪಂಚಾಯತ್‌ಗಳು, ಪುರಸಭೆಗಳು ಮತ್ತು ನಗರಸಭೆಗಳು ಕ್ರಮ ಕೈಗೊಂಡಿವೆ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಇ) ನಾಯಿ ಮತ್ತು ಕುದುರೆ –ಈ ಪ್ರಾಣಿಗಳ ಕಡಿತಕ್ಕೆ ಅತ್ಯಾಧುನಿಕವಾದ ಆಂಟಿ ರೇಬಿಸ್ ವ್ಯಾಕ್ಸಿನ್ (ರ್‍ಯಾಬೀಪೂರ್ /ಅಭಯರಬ್ ಚುಚ್ಚುಮದ್ದು) ಮತ್ತು ಟೇಟಾನಸ್ ಟಾಕ್ಸೈಡ್ ಚುಚ್ಚುಮದ್ದುಗಳನ್ನು ಹಾಗೂ ವಿಷಪೂರಿತ ಹಾವು ಕಡಿತಕ್ಕೆ ಆಂಟಿ ಸ್ನೇಕ್ ವೆನಮ್ ಎಂಬ ಚುಚ್ಚುಮದ್ದು ಗಳನ್ನು ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಪೂರೈಸಲಾಗಿದೆ

ಈ)ರಾಜ್ಯದಲ್ಲಿ ಒಟ್ಟು 2,623 ಸರ್ಕಾರಿ ಆಸ್ಪತ್ರೆಗಳು ಇದ್ದು, 709 ವೈದ್ಯರ ಕೊರತೆ ಇದೆ

ಉ)ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ

ಅನುಬಂಧ–1

ಬೆಂಗಳೂರಿನಲ್ಲಿ ಇತ್ತೀಚೆಗೆ ಬೀದಿನಾಯಿಗಳ ಕಾಟದಿಂದ ಆಗುತ್ತಿರುವ ಅನಾಹುತವನ್ನು ಮನಗಂಡು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಾರ್ಡುಗಳಲ್ಲೂ ಹಗಲು ಮತ್ತು ರಾತ್ರಿ ವಿಶೇಷ ಕಾರ್ಯಾಚರಣೆ ನಡೆಸಿ, ಸಂತಾನಹರಣ ಶಸ್ತ್ರ ಚಿಕಿತ್ಸೆಯ ಜೊತೆಗೆ ಸಮಸ್ಯಾತ್ಮಕ ನಾಯಿಗಳನ್ನು ದಯಾಮರಣ ಗೊಳಪಡಿಸಲಾಗಿತ್ತದೆ

2001ನೇ ಇಸವಿಯಲ್ಲಿ ಮೊದಲು ಬೀದಿನಾಯಿಗಳನ್ನು ಕೊಲ್ಲಲಾಗುತ್ತಿತ್ತು ಆದರೆ 2001 ರಿಂದೀಚೆಗೆ ಎಲ್ಲಾ ನಾಯಿಗಳನ್ನು ಕೊಲ್ಲಲು ಕಾನೂನನಲ್ಲಿ ಅವಕಾಶವಿಲ್ಲದ ಕಾರಣ ಮಹಾನಗರ ಪಾಲಿಕೆಯ ಎ ಬಿ ಸಿ ಕಾರ್ಯಕ್ರಮ ಅನ್ವಯ ನಾಯಿಗಳ ಸಂತತಿಯನ್ನು ಕಡಿತಗೊಳಿಸುವ ಉದ್ದೇಶ ಹೊಂದಿದ್ದು, ಇದುವರೆಗೆ ನಾಯಿಗಳ ಶೇಕಡಾ 21 ರಷ್ಟು ಕಡಿಮೆ ಯಾಗಿರುವುದಲ್ಲದೆ ನಗರದ ವ್ಯಾಪ್ತಿಯಲ್ಲಿ ರೇಬಿಸ್ ಪ್ರಕರಣಗಳು ಸಂಪೂರ್ಣ ಇಲ್ಲದಂತಾಗಿರುತ್ತದೆ

ರಾಜ್ಯದ ಇತರೆ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಕಾಟ ತಡೆಯಲು ಅವುಗಳನ್ನು ಹಿಡಿದು ಹೊರವಲಯದ ನಿರ್ಜನ ಪ್ರದೇಶದಲ್ಲಿ ಬಿಡಲು ಮತ್ತು ಸಾಕುವ ನಾಯಿಗಳಿಗೆ ಪರವಾನಗಿ ಕಡ್ಡಾಯಗೊಳಿಸಲಾಗಿದೆ ಹಾಗೆಯೇ ಪ್ರಾಣಿ ಜನನ ನಿಯಂತ್ರಣ ಕಾಯಿದೆ ಅಡಿ ಬೀದಿ ನಾಯಿಗಳಿಗೆ ಸರ್ಕಾರೇತರ ಸಂಸ್ಥೆಗಳ ಸಹಕಾರದೊಂದಿಗೆ ಲಸಿಕೆ ನೀಡುವ ಕಾರ್ಯಕ್ರಮದ ಜೊತೆಗೆ ಹುಚ್ಚುನಾಯಿ ರೋಗ ನಿರೋಧಕ ಲಸಿಕೆ ಹಾಕಿಸಿ, ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿ ಬಿಡಲಾಗುತ್ತದೆ ಮತ್ತು 2001ರ ಆದೇಶದ ಪ್ರಕಾರ ದೋಷಪೂರಿತ ನಾಯಿಗಳ ಹುಚ್ಚು ನಾಯಿಗಳ ಮತ್ತು ಮರಣಾಂತಿಕ ಖಾಯಿಲೆಗಳಿಂದ ನರಳುವ ನಾಯಿಗಳನ್ನು ಪಶು ವೈದ್ಯಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ನಂತರ ಚಿರನಿದ್ರೆಗೆ ಒಳಪಡಿ ಸಲಾಗುತ್ತಿದೆ ಬೀದಿನಾಯಿಗಳ ಕಡಿತಕ್ಕೊಳಗಾದ ಸಾರ್ವಜನಿಕರಿಗೆ ಔಷಧೋಪಚಾರ ಮತ್ತು ರೂ 1000–00ಗಳ ಪರಿಹಾರವನ್ನುಸಹ ನೀಡಲಾಗುತ್ತಿದೆ ಈ ಮೂಲಕ ಬೀದಿನಾಯಿಗಳ ಉಪಟಳವನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಅಲ್ಲದೆ ದಿನಾಂಕ 12–01–2007ರ ಸರ್ಕಾರ ಆದೇಶ ಸಂ ನಅಇ 126 ಎಂಎನ್‌ವೈ 2007ರಲ್ಲಿ ಬೀದಿನಾಯಿಗಳ ನಿಯಂತ್ರಣ ಹಾಗೂ ಎ ಬಿ ಸಿ ಕಾರ್ಯಕ್ರಮದ ಅನುಷ್ಠಾನದ ಪುನರ್ ವಿಮರ್ಶೆಗಾಗಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಉನ್ನತಮಟ್ಟದ ಸಮಿತಿಯನ್ನು ರಚಿಸಲಾಗಿದೆ

ರಾಜ್ಯದಲ್ಲಿ ಇತರೆ ನಗರಸಭೆ/ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಿಗೆ ಸಂಬಂಧಿದಂತೆ ಪೌರಾಡಳಿತ ನಿರ್ದೇಶಕರು ಬೀದಿ ನಾಯಿಗಳ ಜನನ ನಿಯಂತ್ರಣ ಕೈಗೊಳ್ಳಲು ಏಜೆನ್ಸಿಗಳನ್ನು ನೇಮಕ ಮಾಡಿ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಿ ಸುತ್ತೋಲೆಯನ್ನು ಹೊರಡಿಸಿರುತ್ತಾರೆ

ಅನುಬಂಧ–2

ದಿನಾಂಕ 11–07–2007ಕ್ಕೆ ಖಾಲಿ ಇರುವ ವೈದ್ಯಾಧಿಕಾರಿಗಳ ಜಿಲ್ಲಾವಾರು ವಿವರ

ಕ್ರ ಸಂ	ಜಿಲ್ಲೆಗಳು	ಪ್ರೋಗ್ರಾಮ್ ಅಧಿಕಾರಿಗಳು	ಟಿಹೆಚ್‌ಓ	ತಜ್ಞರು	ಜೆಡಿಎಂಒ
1	ಬೆಂಗಳೂರು(ನ)		1	2	6	4
2	ಬೆಂಗಳೂರು(ಗ್ರಾ)	–	6	2	1	
3	ಚಿತ್ರದುರ್ಗ	3	5	5	0	
4	ದಾವಣಗೆರೆ	–	4	9	2	
5	ಕೋಲಾರ	3	10	11	0	

6	ಶಿವಮೊಗ್ಗ	5	6	16	1
7	ತುಮಕೂರು	2	9	26	2
8	ಮೈಸೂರು	3	4	6	2
9	ಮಂಡ್ಯ 3	5	16	0	
10	ಚಾಮರಾಜನಗರ	2	2	5	2
11,	ಕೊಡಗು 2	2	28	0	
12	ದಕ್ಷಿಣ ಕನ್ನಡ	2	2	5	2
13	ಉಡುಪಿ 1	3	13	3	
14	ಚಿಕ್ಕಮಗಳೂರು	34	7	2	
15	ಹಾಸನ 3	5	27	2	
16	ಬೆಳಗಾಂ 3	6	28	2	
17	ಬಾಗಲಕೋಟೆ	2	3	7	1
18	ಬಿಜಾಪುರ	4	4	13	1
19	ದಾರವಾಡ	2	4	3	1
20	ಗದಗ್ 2	4	1	1	

21	ಹಾವೇರಿ	5	4	12	3
22	ಉತ್ತರ ಕನ್ನಡ	5	9	20	1
23	ಗುಲ್ಬರ್ಗ	4	7	33	18
24	ಬಳ್ಳಾರಿ	3	3	46	9
25	ರಾಯಚೂರು	–	2	25	17
26	ಕೊಪ್ಪಳ	1	4	20	10
27	ಬೀದರ್	3	4	17	5
	ಒಟ್ಟು	**69**	**126**	**421**	**93**
	ಒಟ್ಟು	**709**			